ಕ್ರ. ಸಂ.	ಗ್ರಾಮಗಳ ಹೆಸರು	ವಿಸ್ತೀರ್ಣ		
		ಖನ್ ಎ–ಗು	ಖರಾಬು ಎ–ಗು	ಬಾಕಿ ಎ–ಗು
1	ಕೆಂಪನಹೊಡ್ಡೇರಿ	9-17	1-10	8-07
2	ನಾಗೇನಹಳ್ಳಿ	628-35	123-15	505-20
3	ತಿಮ್ಮರಾಜನಹಳ್ಳಿ	135-21	22-29	112-32
4	ಗಿರಿಯನಹಳ್ಳಿ	8-29	1-13	7-16
	ಒಟ್ಟು	**782-22**	**148-27**	**633-35**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೫೯ (೨೪೨೫)

ಸದಸ್ಯರ ಹೆಸರು : ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಬೆಳ್ಳಾವಿ)

ಉತ್ತರಿಸುವವರು : ಶ್ರೀ ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಪ್ರಶ್ನೆ

ಅ) ತುಮಕೂರು ಜಿಲ್ಲೆಯ ಬೆಳ್ಳಾವಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಅರಣ್ಯ ಜಮೀನುಗಳಲ್ಲಿ ಸುಮಾರು ವರ್ಷಗಳಿಂದ ವಸತಿರಹಿತರು ಮನೆಯನ್ನು ನಿರ್ಮಿಸಿಕೊಂಡು ಗ್ರಾಮಗಳಾಗಿ ಪರಿವರ್ತನೆಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಇಂತಹ ಗ್ರಾಮಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

ಇ) ಈ ರೀತಿ ಪರಿವರ್ತಿಸಲು ಸರ್ಕಾರ ಕಾಲಮಿತಿಯನ್ನೇನಾದರೂ ನಿಗದಿಪಡಿಸಿಕೊಂಡಿದೆಯೇ ;

ಈ) ಹಾಗಿದ್ದಲ್ಲಿ ಯಾವಾಗ ಜಾರಿಗೆ ಬರುವುದು ?

ಉತ್ತರ

ಅ) ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನಲ್ಲಿ ಅಂಕಸಂದ್ರ ರಾಜ್ಯ ಅರಣ್ಯ ಪ್ರದೇಶದಲ್ಲಿ ಅನಧಿಕೃತವಾಗಿ ಗುಡಿಸಲು/ಮನೆಗಳನ್ನು ಕಟ್ಟಿಕೊಂಡು ಹಲವಾರು ವರ್ಷಗಳಿಂದ ವಾಸಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ಮನೆ ನಿರ್ಮಿಸಿಕೊಂಡಲ್ಲಿ ಅಂತಹ ಪ್ರದೇಶಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ. ಹೀಗಿದ್ದಾಗ್ಯೂ ಅರಣ್ಯ ಪ್ರದೇಶದ ಅತಿಕ್ರಮಣಗಳನ್ನು ತೆರವುಗೊಳಿಸುವ ಬಗ್ಗೆ ಅರಣ್ಯ ಕಾಯ್ದೆ ೧೯೬೩ರಂತೆ ಕ್ರಮ ತೆಗೆದುಕೊಳ್ಳಲಾಗುವುದು.

ಇ) ಅನ್ವಯಿಸುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೪೨ (೨೩೬೨)

ಸದಸ್ಯರ ಹೆಸರು : ಶ್ರೀ ಮಾಧುಸ್ವಾಮಿ ಜೆ.ಸಿ (ಚಿಕ್ಕನಾಯಕನಹಳ್ಳಿ)

ಉತ್ತರಿಸುವವರು : ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಪ್ರಶ್ನೆ

ಅ) ಬೆಂಗಳೂರು ಸೇರಿದಂತೆ ರಾಜ್ಯದಲ್ಲಿ ಕೆ.ಐ.ಎ.ಡಿ.ಬಿ ಮಂಡಳಿಯವರು ಯಾವ ಯಾವ ಸ್ಥಳದಲ್ಲಿ ಎಷ್ಟೆಷ್ಟು ಭೂಮಿಯನ್ನು ಸರ್ಕಾರ ಸ್ವಾಧೀನಪಡಿಸಿಕೊಂಡಿದೆ ;

ಆ) ಈ ರೀತಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಅನುಸರಿಸುವ ಮಾನದಂಡವೇನು ;

ಇ) ಸ್ವಾಧೀನಪಡಿಸಿಕೊಂಡಿರುವ ಭೂಮಿಯಲ್ಲಿ ಇನ್ನು ಎಷ್ಟು ವಿಸ್ತೀರ್ಣದ ಭೂಮಿ ಕೆ.ಐ.ಎ.ಡಿ.ಬಿ.ಯ ವಶದಲ್ಲಿದೆ.